ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು - 560 001


**ಸಂಖ್ಯೆ:** ಸಶಿಅ/ಸಂ.ಮೌ/ಚಿ.ಚೇ.ಗೋ.ಮಾ.ಪ./01/2011–12 **ದಿನಾಂಕ:** 5–07–2011

**ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಲು ಉದ್ಧೇಶಿಸಿರುವ ಚಿಣ್ಣರ ಚೇತನ ಗೋಡೆ ಮಾಸಿಕ ಪತ್ರಿಕೆಯ ವಿನ್ಯಾಸ, ಮುದ್ರಣ ಮತ್ತು ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿತರಿಸುವ ಕುರಿತು ಈ ಕಛೇರಿಯಲ್ಲಿ ನೊಂದಾಯಿಸಿಕೊಂಡಿರುವ ಎಂಪ್ಯಾನಲ್ ವೆಂಡರ್ಸ್ ಮುದ್ರಣ ಸಂಸ್ಥೆಗಳಿಂದ "ಆಸಕ್ತಿಯನ್ನು ವ್ಯಕ್ತಪಡಿಸಲು" ಆಹ್ವಾನ**

1. ಸರ್ವ ಶಿಕ್ಷಣ ಅಭಿಯಾನ ಮಿಷನ್ – ಕರ್ನಾಟಕವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗಾಗಿ 2001–02ನೇ ಸಾಲಿನಿಂದ ಹಲವಾರು ಮಧ್ಯವರ್ತನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಕಾರ್ಯಕ್ರಮದಡಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಕಲಿಕೆಯ ಸಾಧನೆಗೆ ಪೂರಕವಾಗಿ, ಭಾಷಾ ಸಾಮರ್ಥ್ಯವನ್ನು ಮತ್ತು ಸಾಮಾನ್ಯ ಜ್ಞಾನವನ್ನು ಉತ್ತಮಪಡಿಸುವ ಸಲುವಾಗಿ **"ಚಿಣ್ಣರ ಚೇತನ ಗೋಡೆ ಮಾಸಿಕ ಪತ್ರಿಕೆ"ಯ** ರಚನೆ, ಮುದ್ರಣ ಮತ್ತು ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿತರಿಸಲು ಉದ್ದೇಶಿಸಲಾಗಿದೆ.
2. ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಈಗಾಗಲೇ ಪ್ರಾಥಮಿಕ ಶಾಲೆಗಳಿಗೆ ತಮ್ಮ ಸಂಸ್ಥೆಗಳ ವತಿಯಿಂದ ಮಕ್ಕಳಿಗಾಗಿ ಕನ್ನಡ ಗೋಡೆ ಅಥವ ಮಾಸ ಪತ್ರಿಕೆಗಳನ್ನು ರಚಿಸಿ, ವಿತರಿಸಿರುವ ಅನುಭವವನ್ನು ಹೊಂದಿರುವ ಸಂಸ್ಥೆ / ಏಜೆನ್ಸಿಗಳಿಂದ ಸರ್ವ ಶಿಕ್ಷಣ ಅಭಿಯಾನದಡಿ ಗೋಡೆ ಪತ್ರಿಕೆ–ರಚಿಸಿ, ವಿನ್ಯಾಸ, ಮುದ್ರಣ ಹಾಗೂ ವಿತರಣೆ ಕಾರ್ಯ ಕೈಗೊಳ್ಳಲು "ಇಚ್ಛೆಯನ್ನು ವ್ಯಕ್ತಪಡಿಸುವ" ಪ್ರಸ್ತಾವನೆಗಳಿಗಾಗಿ **"ಆಸಕ್ತಿಯನ್ನು ವ್ಯಕ್ತಪಡಿಸಲು"** ಆಹ್ವಾನ ನೀಡಿದೆ.
3. ಈ ಕುರಿತು "ಇಚ್ಛೆಯನ್ನು ವ್ಯಕ್ತಪಡಿಸಲು" ಇದರೊಂದಿಗೆ ಲಗತ್ತಿಸಿರುವ ಮುದ್ರಣ ಸಂಸ್ಥೆಗಳು ಕೆಳಕಂಡ ಸೂಚಿತ ತಾಂತ್ರಿಕ ವಿಶಿಷ್ಟತೆಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಹಣಕಾಸಿನ ಪ್ರಸ್ತಾವನೆಯನ್ನು **ದಿನಾಂಕ 14–07–11 ರ ಮಧ್ಯಾಹ್ನ 1.00 ಗಂಟೆಯೊಳಗಾಗಿ** ಈ ಕಛೇರಿಗೆ ಸಲ್ಲಿಸಲು ಕೋರಿದೆ.
4. <u>ತಾಂತ್ರಿಕ ವಿಶಿಷ್ಟತೆಗಳ ವಿವರ:</u>

| ಕ್ರ.ಸಂ. | ವಿವರಗಳು | ತಾಂತ್ರಿಕ ವಿಶಿಷ್ಟತೆಗಳು |
|---|---|---|
| 1 | ಶೀರ್ಷಿಕೆ | ಚಿಣ್ಣರ ಚೇತನ ಮಾಸಿಕ ಗೋಡೆ ಪತ್ರಿಕೆ |
| 2 | ಅಂದಾಜು ಅಳತೆ | 3' x 2' (ಅಡಿಗಳಲ್ಲಿ) |
| 3 | ಬಣ್ಣ | ಬಹು ವರ್ಣ (Multi colour) |
| 4 | ಕಾಗದ ಸಾಮಗ್ರಿ ಮತ್ತು ವಿನ್ಯಾಸ ಹಾಗೂ ಮುದ್ರಣ | ಆರ್ಟ್ ಪೇಪರ್ 135 ಜಿ.ಎಸ್.ಎಂ. ಆರ್ಟ್ ಪೇಪರ್‌ನಲ್ಲಿ ವಿನ್ಯಾಸಗೊಳಿಸಿದ ಸಾಹಿತ್ಯ ಮುದ್ರಿಸಿ ಲ್ಯಾಮಿನೇಟ್ ಮಾಡುವುದು (ಮಾದರಿಯನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಲ್ಲಿನ REMS ವಿಭಾಗದಲ್ಲಿ ಪಡೆಯಬಹುದು.) |
| 5 | ಅಂದಾಜು ಸಂಖ್ಯೆ | ಪ್ರತಿ ಮಾಹೆ 24000 ಪ್ರತಿಗಳು |
| 6 | ಅಂದಾಜು ಸಂಚಿಕೆಗಳು | ಆಗಸ್ಟ್ 2010 ರಿಂದ (8 ತಿಂಗಳು) ಮಾರ್ಚ್ 2011 ರವರೆಗೆ |
| 7 | ಸರಬರಾಜು | ಈ ಕಛೇರಿಯ ಸಂಪಾದಕ ಮಂಡಳಿ ಅನುಮೋದಿಸಿದ ಕರಡನ್ನು ಮುದ್ರಿಸಿ, ಲ್ಯಾಮಿನೇಟ್ ಮಾಡಿ ಸೂಚಿತ ಸಂಖ್ಯೆಗಳಿಗೆ ಅನುಗುಣವಾಗಿ ಬಂಡಲ್ ಮಾಡಿ, 10 ದಿನಗಳೊಳಗಾಗಿ ರಾಜ್ಯದ ಎಲ್ಲಾ 203 ಬ್ಲಾಕ್‌ಗಳಿಗೆ |